ಸದಸ್ಯರುಗಳಿಗೆ ತಪ್ಪು ಅಭಿಪ್ರಾಯವಿರುತ್ತದೆ. ನಾವು ಯಾರಾದರೂ Doctor ಅನ್ನು ತೆಗೆದುಕೊಂಡಾಗ, ಇವರೇನೋ privatization ಮಾಡುತ್ತಿದ್ದಾರೆ, ನಮ್ಮ ಆಸ್ಪತ್ರೆಗಳಿಗೆ ಇವರು ಗಿರಾಕಿಗಳನ್ನು ಹಿಡಿದುಕೊಳ್ಳುವುದಕ್ಕೋಸ್ಕರ ಬರುತ್ತಾರೆಂಬ ಭಾವನೆ ಇದೆ. ಆ ಭಾವನೆಗಳನ್ನು ನಾವು ತೊಡೆದು ಹಾಕಬೇಕಾಗಿದೆ. ಅದನ್ನೂ ನಾವು ಮತ್ತೊಂದು ದೃಷ್ಟಿಕೋನದಿಂದ ಯೋಚಿಸಬೇಕು. ಆ ದೃಷ್ಟಿಯಿಂದ adopt ಮಾಡಿಕೊಳ್ಳುವ ಸಂದರ್ಭದಲ್ಲಿ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂಬ ಮಾತನ್ನು ಹೇಳುತ್ತಿದ್ದೇನೆ.

ಆ. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಅಲ್ಪಸಂಖ್ಯಾತ ಮತ್ತು ವಕ್ಫ್ ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ 19-7-2007 ರಂದು 9ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 80 ಪ್ರಶ್ನೆಗಳ ಪೈಕಿ 70 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು :- ಮಂಡಿಸಲಾಯಿತು.

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಲಿಖಿತ ಮೂಲಕ ಉತ್ತರಿಸುತ್ತೇನೆಂದು ಹೇಳುತ್ತಾರೆ. ಆದರೆ, ಇಲ್ಲಿ ನಮಗೆ ಉತ್ತರಗಳೇ ಸಿಗುವುದಿಲ್ಲ. ನನಗೆ ಮೂರು ದಿವಸಗಳಿಂದಲೂ ಬಂದಿಲ್ಲ. ಇದರ ಬಗ್ಗೆ ಯಾರಾದರೂ ಸಚಿವರು ಹೇಳಬೇಕು. Parliamentary Affairs Minister ಸಹ ಇಲ್ಲ. ಯಾರೂ ಇಲ್ಲ.

ಉಪಾಧ್ಯಕ್ಷರು : ನಿಮಗೆ ಲಿಖಿತ ಮೂಲಕ ಉತ್ತರಿಸುವ ಪಟ್ಟಿ ಬಂದಿಲ್ಲವೇ?

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಪಟ್ಟಿ ಇಲ್ಲ, ಪಟ್ಟಿಯಲ್ಲಿ ಉತ್ತರಗಳೇ ಇರುವುದಿಲ್ಲ. ಎರಡಕ್ಕೆ ಉತ್ತರ ಕೊಡುತ್ತಾರೆ, ಮತ್ತೆರಡಕ್ಕೆ ಉತ್ತರ ಕೊಡುವುದಿಲ್ಲ.

ಉಪಾಧ್ಯಕ್ಷರು :- ಕೊಡಿಸುತ್ತೇನೆ.

ಉಪಾಧ್ಯಕ್ಷರು :- 12ನೇ ಜುಲೈ 2007 ರಂದು ತಡೆಹಿಡಿಯಲಾದ ಪ್ರಶ್ನೆಗಳು. ಪಿ.ಸಿ. ಮೋಹನ್.

(ಸದಸ್ಯರು ಗೈರುಹಾಜರಿದ್ದರು)